ಕೆಲಸ, ಅದರಲ್ಲಿ ನಿನಗೆ ಏನು ತಪ್ಪು ಕಾಣಿಸಿತು?' ಎಂದ.

'ಒಳ್ಳೆ ಕೆಲಸನಾ . . . ?'

'ಮತ್ತೆ ಕೆಟ್ಟ ಕೆಲಸನಾ? ಎಲ್ಲರ ಜವಾಬ್ದಾರಿ. ಎಲ್ಲರೂ ಮಾಡಬೇಕಾದದ್ದೆ'

'ಒಬ್ಬರು ಮಾಡಿದ್ರ ಎಲ್ಲಾ ಸರಿಯಾಗಿ ಬಿಡುತ್ತದೆ ಏನು?'

'ಹನಿಹನಿ ಗೂಡಿದ್ರೆ ಹಳ್ಳ, ತೆನೆತೆನೆ ಕೂಡಿದ್ರ ರಾಶಿ ಅಲ್ಲವೇನು ...? ನಾವು ಒಬ್ಬೊಬ್ರ ಸುಧಾರಿಸಿದ್ರ ದೇಶ ಸುಧಾರಿಸೋದು'

'ಹೇ, ಏನೋ ಸಿಟಿಯಿಂದ ಬಂದವನು ಅಂತ ದೋಸ್ತಿ ಮಾಡಿದ್ರೆ ... ನೀನು ಪಕ್ಕಾ ಜವಾರಿ ತರಹ ಮಾತಾಡ್ತಿಯಲ್ಲ'

'ಅಂದ್ರೇ ... ?'

'ಅಂದ್ರ ಸೂಕ್ಷ್ಮ ಇಲ್ಲ. ಎಲ್ಲಾ ಚೆನ್ನನ ಹಾಗೆ ಯೋಚಿಸ್ತಿಯಾ?'

'ಹೌದು, ನಮ್ಮಪ್ಪನು ಇದನ್ನ ಹೇಳೋದು. ಯಾವಾಗಲೂ ಒಳ್ಳೆ ಕೆಲಸ ಮಾಡು ಅಂತಾನೆ' ಎಂದ.

'ಸುದ್ದಾಯ್ತು ನಡಿ, ನಿನ್ನ ಜೊತೆ ಒಳ್ಳೆ ದೋಸ್ತಿ ಮಾಡಿದೆ' ಎಂದು ಮನಸ್ಸಿನಲ್ಲಿ ಅಂದುಕೊಂಡ ನಾಗ, 'ನಡಿ ಹೋಗೋಣ, ಹೊತ್ತಾಯ್ತು' ಎಂದ. ಇಬ್ಬರೂ ಶಾಲೆಯ ಕಡೆ ನಡೆದರು.

ಚೆನ್ನ ಎಲ್ಲಾ ಕಡೆಯೂ ಒಂದಲ್ಲ ಒಂದು ಕೆಲಸ ಮಾಡುತ್ತಾ ಬರುತ್ತಿದ್ದ. ಶಾಲೆಯಲ್ಲಿ ಬಂದಾಗಲೂ ಆವರಣದಲ್ಲಿ ಬಿದ್ದಿದ್ದ ಕಸ ಆರಿಸಿ ಒಂದು ಕಡೆ ಹಾಕಿದ. ಚೆನ್ನನ ಕೆಲಸವನ್ನು ಯಾವ ಶಿಕ್ಷಕರು ಗಮನಿಸುತ್ತಿರಲಿಲ್ಲ.

ಅಂದು ಅವನ ಪಕ್ಕ ಬಂದು ಕುಳಿತು 'ಚೆನ್ನ, ನಿನ್ನ ಕೆಲಸ ಬಹಳ ಖುಷಿ ಕೊಡುತಿದೆ. ನಾನು ನಿನ್ನ ಜೊತೆಯಾಗಲಾ?'ಎಂದ ರಾಮು.

'ಸರಿ ಆಗು' ಎಂದು ಅಷ್ಟೇ ಉತ್ತರ ಕೊಟ್ಟ.



'ಏನಾದರೂ ಮಾತನಾಡೋ?' ಎಂದ ರಾಮು.

'ನಾನು ಲೆಕ್ಕ ಬಿಡಿಸುತ್ತಿದ್ದೇನೆ. ಮಾತಾಡಿದರೆ ಲೆಕ್ಕ ತಪ್ಪಾಗುತ್ತದೆ' ಎಂದ ಚೆನ್ನ.

ರಾಮು ಅವನ ನೋಟ್‌ಬುಕ್ ನೋಡಿದಾಗ. ತಾನು ಬಿಡಿಸಲಾಗದ ಲೆಕ್ಕವನ್ನು ಬಿಡಿಸಿ, ಮುಗಿಸಲು ಬಂದಿದ್ದ. ಇವನು ಜಾಣನಿದ್ದಾನೆ ಎಂದು ಖಾತ್ರಿ ಮಾಡಿಕೊಂಡ. ಅಕ್ಷರವೂ ಮುತ್ತಿನಂತಾಗುತ್ತಿದ್ದವು. ಆದರೆ, ತನ್ನ ಪಾಡಿಗೆ ತಾನು ಇರುವ ಕಾರಣಕ್ಕೆ, ಶಿಕ್ಷಕರು ಮಕ್ಕಳ ವೈಯಕ್ತಿಕ ಕಾಳಜಿ ವಹಿಸುತ್ತಿದ್ದಿಲ್ಲವಾದ್ದರಿಂದ ಅವನು ಉಳಿದವರ ದೃಷ್ಟಿಯಲ್ಲಿ ಅಬ್‌ನಾರ್ಮಲ್ ಆಗಿ ಕಾಣುತ್ತಿದ್ದ.

'ಅಲ್ಲ... ನೀನು ಯಾಕೆ ಹೆಚ್ಚು ಮಾತಾಡೋಲ್ಲ?' ಎಂದ ರಾಮು.

'ನನ್ನ ಕೆಲಸ ನನಗೆ. ಅನಾವಶ್ಯವಾಗಿ ಯಾಕೆ ಮಾತಾಡಬೇಕು. ಏನಾದರೂ ಒಳ್ಳೆಯದು ಹೇಳಿದರೆ ಗೆಳೆಯರು ಕೇಳೊಲ್ಲ, ಗುರುಗಳು ಮಾತನ್ನೆ ಕೇಳಿಸಿಕೊಳ್ಳಲ್ಲ. ಅದಕ್ಕಿಂತಲೂ ನನ್ನ ಪಾಡಿಗೆ ನಾನು ಇರುವುದು ಛಲೋ ಅಲ್ಲೇನು?' ಎಂದು ಪ್ರಶ್ನೆ ಹಾಕಿದ.

ಚೆನ್ನನ ಮಾತು ಸತ್ಯ ಅನಿಸಿತು. 'ಆಯ್ತು ಇನ್ನ ಮುಂದೆ ನಿನ್ನ ಎಲ್ಲಾ ಕೆಲಸಗಳಿಗೆ ಜೊತೆಯಾಗುವೆ. ಸೇರಿಸಿಕೊಳ್ಳುತ್ತೀಯಾ?' ಎಂದ ರಾಮು.

'ಸೇರಿಸಿಕೊಳ್ಳಲಿಕ್ಕೆ ನಾನ್ಯಾರು. ಇಷ್ಟವಾದರೆ ನೀನು ಮಾಡು' ಎಂದು ವೇದಾಂತಿಯ ತರಹ ಮಾತನಾಡಿದ ಚೆನ್ನ.

ಶಾಲೆಯಲ್ಲಿ ಕಸ ಬಳಿಯಲು ಹಿಂದೇಟು ಹಾಕುತ್ತಿದ್ದರೂ ಆಗಾಗ ಚೆನ್ನನೇ ಬಳಿಯುತ್ತಿದ್ದ. ಗೆಳೆಯರಿಗೆಲ್ಲ ಅನಾವಶ್ಯಕವಾಗಿ ಪೇಪರ್ ಹರಿಯಬೇಡಿ ಎಂದು ಹೇಳುತ್ತಿದ್ದರೆ 'ಹೋಗೋ ಹೋಗು, ಬಂದ ಬುದ್ಧಿ ಹೇಳಲಿಕ್ಕೆ ಗಾಂಧಿ' ಎನ್ನುತ್ತಿದ್ದರು. ರಾಮುವು 'ಚೆನ್ನ ಹೇಳುವುದರಲ್ಲಿ ಸತ್ಯ ಇದೆ. ಕಸ ತರಗತಿಯಲ್ಲಿ ಎಸೆಯುವುದನ್ನು ಕಡಿಮೆ ಮಾಡಿ. ತರಗತಿ ಸ್ವಚ್ಛ ಇದ್ದರೆ ಓದಲು ಮನಸ್ಸು ಇರುವುದು' ಎಂದ. ಆದರೆ, ಯಾರೂ ಕೇರ್ ಮಾಡಲಿಲ್ಲ. ರಾಮು ಗುರುಗಳಿಗೆ ಹೇಳಿದರೂ ಅವರು ಕೇಳಿಸಿಕೊಳ್ಳಲಿಲ್ಲ. ಶಾಲೆಯಲ್ಲಿ ಸ್ವಚ್ಛತೆಯ ಬಗ್ಗೆ ಮಹತ್ವನೂ ಕೊಡುತ್ತಿರಲಿಲ್ಲ. ತರಗತಿಯಲ್ಲಿ